O.S. 266/2022

ಪಿ. ಡಬ್ಲ್ಯೂ ಃ 1

**ಸಾಕ್ಷಿಗೆ ದಿನಾಂಕ 14.11.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ B.S.Y ವಕೀಲರಿಂದಃ**

ನನ್ನ ತಂದೆ O.S. 96/2022 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವ ದಾಖಲೆಗಳು ಇಲ್ಲ. ಯಾವ ದಿನಾಂಕದಂದು ನಾನು ಪ್ರತಿವಾದಿಗೆ ನೋಟೀಸ್ ನೀಡಿರುತ್ತೇನೆ ನೆನಪಿಲ್ಲ. ಪ್ರತಿವಾದಿಗೆ ಎಷ್ಟು ನೋಟೀಸ್ ನೀಡಿರುತ್ತೇನೆ ನನಗೆ ಗೊತ್ತಿಲ್ಲ. ನನ್ನ ಬಳಿ 3 ಲಕ್ಷ ಹಣ ಇತ್ತು ತೋರಿಸಲು ನಾನು ನ್ಯಾಯಾಲಯಕ್ಕೆ ಬ್ಯಾಂಕಿನ ದಾಖಲೆ ನೀಡಿರುತ್ತೇನೆ. ಬ್ಯಾಂಕ್ ಸ್ಟೇಟ್ ಮೆಂಟ ಪ್ರಕಾರ ನನ್ನ ಖಾತೆಯಲ್ಲಿ 3 ಲಕ್ಷ ಹಣ ಇದ್ದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನನ್ನ ವ್ಯವಸಾಯದಿಂದ ಬಂದ 3 ಲಕ್ಷ ಹಣವನ್ನು ಪ್ರತಿವಾದಿಗೆ ಕೊಟ್ಟಿರುತ್ತೇನೆ ಆ ಬಗ್ಗೆ ದಾಖಲೆ ಇಲ್ಲ. ನನ್ನ ತಂದೆ ಹಣಕಾಸಿನ ವ್ಯವಹಾರ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯೊಂದಿಗೆ ಲೇವಾ ದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. 2015 ರಲ್ಲಿ ನನ್ನ ತಂದೆ ಹಾಗೂ ಪ್ರತಿವಾದಿಯ ನಡುವೆ 70 ಸಾವಿರ ಹಣದ ವ್ಯವಹಾರ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ 70 ಸಾವಿರ ಭದ್ರತೆಗಾಗಿ ನಿಪಿ-1 ರ ಖಾಲಿ ಚೆಕ್ ನ್ನು ಪ್ರತಿವಾದಿ ನನ್ನ ತಂದೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಸಾಲ ತಿರುವಳಿ ಮಾಡಿದ ನಂತರ ನನ್ನ ತಂದೆ ಚೆಕ್ ನ್ನು ಹಿಂದುರುಗಿಸದೇ ತನ್ನ ಬಳಿ ಇಟ್ಟುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯೊಂದಿಗೆ ಒಟ್ಟು ಕುಟುಂಬದಲ್ಲಿ ಇದ್ದೇನೆ ಎಂದರೆ ಸರಿ. ನನ್ನ ತಂದೆ ನ್ಯಾಯಾಲಯಕ್ಕೆ ಪ್ರಕರಣಗಳ ವಿಚಾರದಲ್ಲಿ ಹಾಜರಾಗುವುದು ನನಗೆ ಗೊತ್ತು ಎಂದರೆ ಸರಿ. ಪ್ರತಿವಾದಿ ನನ್ನ ತಂದೆಗೆ ಖಾಲಿ ಚೆಕ್ ನ್ನು ನೀಡಿದ್ದು ನಾನು ಹಾಗೂ ನನ್ನತಂದೆ ಸದರಿ ಚೆಕನ್ನು ಭರ್ತಿ ಮಾಡಿ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಯ ಆದಾಯದ ಮೂಲ ಹೊರತುಪಡಿಸಿ ನನಗೆ ಯಾವುದೇ ಪ್ರತ್ಯೇಕ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ ನಾನು ವ್ಯವಸಾಯ ಹಾಗೂ ವ್ಯಾಪಾರ ಮಾಡುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ 2020-2022 ರ ವರೆಗೂ ಸಹ ಚೆಕ್ ನ್ನು ವಾಪಸ್ಸು ಕೊಡದೆ ನಮ್ಮ ಬಳಿ ಇಟ್ಟುಕೊಂಡು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯ ವಿಳಾಸಕ್ಕೆ ನೋಟೀಸ್ ಕೊಟ್ಟಿರುತ್ತೇನೆ.

ಪ್ರಸ್ತುತ ಪ್ರಕರಣಕ್ಕೂ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ. ದಾವೆಗೋಸ್ಕರ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಬಳಿ ಯಾವುದೇ ಹಣ ಪಡೆದುಕೊಂಡಿಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**